MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - TUESDAY 1-11-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಪಾಮೆಣ್ಣೆ, ಸೋಯಾಬೀನ್ ಎಣ್ಣೆ ಆಮದು ಮೂಲ ದರ ಹೆಚ್ಚಳ

ಕಚ್ಚಾ ಪಾಮೆಣ್ಣೆ ಹಾಗೂ ಕಚ್ಚಾ ಸೋಯಾಬೀನ್ ಎಣ್ಣೆಗಳ ಮೂಲ ಆಮದು ದರ ಕ್ರಮವಾಗಿ $ ಟನ್‌ಗೆ $ 858 ರಿಂದ $ 952 ಹಾಗೂ $ 1274 ರಿಂದ $ 1345 ಕ್ಕೆ ಹೆಚ್ಚಳಗೊಂಡಿದೆಯೆನ್ನಲಾಗಿದೆ. ಆಮದುದಾರರು ಪಾವತಿಸಬೇಕಾದ ಕರವನ್ನು ಮೂಲ ಆಮದು ದರದ ಮೇಲೆ ನಿರ್ಧರಿಸಲಾಗುತ್ತಿದೆಯೆನ್ನಲಾಗಿದೆ. ಆರ್ ಬಿ ಡಿ ಪಾಮೋಲಿನ್ ಎಣ್ಣೆ ಮೂಲ ದರ $ 934 ರಿಂದ $ 971 ಆಗಿದೆ.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 4.5 ಶೇಕಡಾ ಹೆಚ್ಚಳ

ಜಾಗತಿಕ ಪೂರೈಕೆಯ ಕಳವಳದಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 4.5 ಶೇಕಡಾ ಹೆಚ್ಚಳಗೊಂಡು $ 895.77 (4237 ರಿಂಗಿಟ್ಸ್) ಟನ್‌ಗೆ ಆಗಿದೆಯೆನ್ನಲಾಗಿದೆ. ಇಂಡೋನೇಶಿಯಾ ಪಾಮೆಣ್ಣೆಯ ರಫ್ತು ಲೆವಿ ವಿನಾಯತಿಯನ್ನು ಈ ವರ್ಷದ ಕೊನೆಯ ತನಕ, ಪಾಮೆಣ್ಣೆಯ ರೆಫೆರೆನ್ಸ್ ದರ $ 800 ಕ್ಕಿಂತ ಹೆಚ್ಚಳವಾಗುವ ತನಕ ವಿಸ್ತರಿಸಿದೆಯೆನ್ನಲಾಗಿದೆ.

## ಹೊಸಬೆಳೆಯ ಹೆಸರುಕಾಳು ಆವಕ ಆರಂಭ ದರ ಇಳಿಕೆ

ಕರ್ನಾಟಕದ ಮಾರುಕಟ್ಟೆಗಳಿಗೆ ಹೊಸಬೆಳೆಯ ಹೆಸರುಕಾಳು ಆರಂಭವಾಗಿದೆಯೆನ್ನಲಾಗಿದ್ದು ದರ ಕನಿಷ್ಠ ಬೆಂಬಲ ಬೆಲೆಗಿಂತ ಇಳಿಕೆಯಾಗಿದೆಯೆನ್ನಲಾಗಿದೆ. ಕನಿಷ್ಠ ಬೆಂಬಲ ಬೆಲೆ ರೂ.7275 ಆಗಿದ್ದು ಗದಗ, ಬಾಗಲಕೋಟೆ ಪ್ರದೇಶಗಳಲ್ಲಿ ಹೊಸಬೆಳೆಯ ಆವಕ ಆರಂಭವಾಗಿದ್ದು ದರ ಉತ್ತಮ ದರ್ಜೆ ರೂ.6400 ರಿಂದ ರೂ.6700 ಮಧ್ಯಮ ರೂ.6000 ದಿಂದ ರೂ.6300 ಹಾಗೂ ಸಾಮಾನ್ಯ ರೂ.5600 ರಿಂದ ರೂ.5800 ಇದೆಯೆನ್ನಲಾಗಿದೆ. ಗುಜರಾತ್ ಹಾಗೂ ಮಹಾರಾಷ್ಟ್ರಗಳಲ್ಲಿ ಬಿತ್ತನೆ ಇಳಿಕೆ ಹಾಗೂ ರಾಜಸ್ತಾನದಲ್ಲಿ ವಿಳಂಬಿತ ಬಿತ್ತನೆಯಾಗಿದ್ದರೂ ಬೇಡಿಕೆ ಹಾಗೂ ಆಮದು ಹೆಸರುಕಾಳು ಲಭ್ಯತೆಯಿಂದ ದರ ಇಳಿಕೆಯಾಗಿದೆಯೆನ್ನಲಾಗಿದ್ದು, ಸರಕಾರ ಕನಿಷ್ಠ ಬೆಂಬಲ ಬೆಲೆಗೆ ಖರೀದಿಸಬೇಕೆಂದು ರೈತರ ಬೇಡಿಕೆಯಾಗಿದೆಯೆನ್ನಲಾಗಿದೆ. ಕರ್ನಾಟಕದಲ್ಲಿ ಹೆಸರುಕಾಳು ಬಿತ್ತನೆ ಪ್ರದೇಶ ಹೆಚ್ಚಳವಿತ್ತೆನ್ನಲಾಗಿದೆ.